ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 11–11–2019

## ಪತ್ರಿಕಾ ಆಮಂತ್ರಣ

## Welcome Address by Chairman, Karnataka State Bar Council : To

**1) Hon'ble Shri Justice Neranahalli Srinivasan Sanjay Gowda,**
**2) Hon'ble Ms. Justice Jyoti Mulimani**
**3) Hon'ble Shri Justice Nataraj Rangaswamy**
**4) Hon'b;e Shri Justice Hemant Chandangoudar,**
**5) Hon'b;e Shri Justice Pradeep Singh Yerur appointed as Additional Judges of the Karnataka High Court**

**Date : 12-11-2019 Tuesday Time 10.00 A.M.**

**Venue : Court Hall No. 1, Principal Bench of the High Court of Karnataka**

## ಪತ್ರಿಕಾ ಪ್ರಕಟಣೆ

## ಪದವಿಯ ಅಧಿಕಾರ ಪ್ರಮಾಣ ವಚನ ಸ್ವೀಕಾರ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ನೇರನಹಳ್ಳಿ ಶ್ರೀನಿವಾಸನ್ ಸಂಜಯ್‌ಗೌಡ, ಜ್ಯೋತಿ ಮೂಲಿಮನಿ, ನಟರಾಜ್ ರಂಗಸ್ವಾಮಿ, ಹೇಮಂತ್ ಚಂದನಗೌಡರ್ ಮತ್ತು ಪ್ರದೀಪ್ ಸಿಂಗ್ ಯೆರೂರ್ ಅವರು ಇಲ್ಲಿ ಇಂದು ಕರ್ನಾಟಕ ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜಭವನದ ಗಾಜಿಮನೆಯಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ರಾಜ್ಯಪಾಲ ವಜೂಭಾಯಿ ವಾಲಾ ಅವರು ನೂತನ ನ್ಯಾಯಮೂರ್ತಿಗಳಿಗೆ ಪದವಿಯ ಅಧಿಕಾರ ಪ್ರಮಾಣ ವಚನವನ್ನು ಬೋಧಿಸಿದರು.

ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ. ಸಿ. ಮಾಧುಸ್ವಾಮಿ ಒಳಗೊಂಡಂತೆ ಗಣ್ಯಾತಿಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ ಎಂ ವಿಜಯ್ ಭಾಸ್ಕರ್ ಅವರೂ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಜರಿದ್ದರು.

## ಕೈಲಾಸ ಮಾನಸ ಸರೋವರ ಯಾತ್ರೆಗೆ ಧನಸಹಾಯ – ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

2019 ನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವತಿಯಿಂದ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಧನಸಹಾಯ ನೀಡಲು ಯೋಜನೆಯನ್ನು ರೂಪಿಸಲಾಗಿದೆ. ಅರ್ಜಿ ಸಲ್ಲಿಸುವವರು ಕೆಳಕಂಡ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ.

1. ಕರ್ನಾಟಕದಿಂದ ಕೈಲಾಸ ಮಾನಸ ಯಾತ್ರೆ ಕೈಗೊಳ್ಳುವ ಪ್ರತಿ ಯಾತ್ರಿಕರಿಗೆ ಗರಿಷ್ಠ ರೂ 30,000/- ದಂತೆ 1500 ಫಲಾನುಭವಿಗಳಿಗೆ ಧನ ಸಹಾಯವನ್ನು 2019-20 ನೇ ಸಾಲಿನಲ್ಲಿ ನೀಡಲಾಗುವುದು.
2. ಕರ್ನಾಟಕ ಖಾಯಂ ನಿವಾಸಿಗಳು ಮಾತ್ರ ಈ ಧನಸಹಾಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಈ ಉದ್ದೇಶಕ್ಕಾಗಿ ಪಾಸ್‌ಪೋರ್ಟ್‌ನಲ್ಲಿ ನಮೂದಿಸಲಾಗಿರುವ ವಿಳಾಸವನ್ನು ಪರಿಗಣಿಸಲಾಗುವುದು.

3. 2019 ನೇ ಸಾಲಿನಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳೂ ಸರ್ಕಾರದ ಧನಹಾಯಕ ಪಡೆಯಲು ಇಚ್ಛಿಸಿದ್ದಲ್ಲಿ ದಿನಾಂಕ: 16–12–2019 ರ ಅವಧಿಯೊಳಗಾಗಿ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಆನ್‌ಲೈನ್ /ಮುದ್ದಾಂ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ನಂತರ ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಅಯೋಜಿಸಿರುವ ಮಾರ್ಗವಾಗಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳು ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ನೀಡುವ ಪ್ರಮಾಣ ಪತ್ರದ ದಿನಾಂಕ ಹಾಗೂ ನೇಪಾಳ ಮಾರ್ಗ ಹೋಗಿ ಬಂದವರಿಗೆ ಚೀನಾ ಸರ್ಕಾರದ ಉದ್ದಿಮೆಯಾದ ಸಿ.ಐ.ಪಿ.ಎಸ್.ಸಿ. ಲ್ಹಾಸ, ಟಿಬೆಟ್–ಚೀನಾ ನೀಡುವ ಪ್ರಮಾಣ ಪತ್ರ ದಿನಾಂಕ ಈ ದಿನಾಂಕಗಳನ್ನು ಸದರಿ ಉದ್ದೇಶಕ್ಕಾಗಿ ಪರಿಗಣಿಲಾಗುವುದು.
5. ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೇಂದ್ರ ಸರ್ಕಾರದ ಮಾರ್ಗವಾಗಿ ಪೂರ್ಣಗೊಳಿಸಿದ ಬಗ್ಗೆ ಕೇಂದ್ರ ಸರ್ಕಾರವು ನೀಡಿದ ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.
6. ನೇಪಾಳ ಮಾರ್ಗವಾಗಿ ಪೂಣಘೊಳಿಸಿದ ಯಾತ್ರಾರ್ಥಿಗಳು ಪೂರ್ಣಗೊಳಿಸಿದ ಬಗ್ಗೆ ಸಿ.ಐ.ಪಿ.ಎಸ್.ಸಿ. ಲ್ಹಾಸ, ಟಿಬಟ್–ಚೀನಾ ನೀಡುವ ಪ್ರಮಾಣ ಪತ್ರ ಹಾಗೂ ಪಾಸ್‌ಪೋರ್ಟ್‌ನಲ್ಲಿ ಚೀನಾ ಸರ್ಕಾರದ ಮುದ್ರೆ ಹೊಂದಿರತಕ್ಕದ್ದು ಹಾಗೂ ಈ ಸಂಬಂಧ ಚೀನಾ ಸರ್ಕಾರದ ನೀಡಿದ ವೀಸಾದ ಪ್ರತಿಯನ್ನು ಒದಗಿಸತಕ್ಕದ್ದು.
7. ಯಾತ್ರೆಯನ್ನು ಕೈಗೊಳ್ಳುವ ಬಗ್ಗೆ ಭಾರತ ಸರ್ಕಾರಕ್ಕೆ ಅರ್ಜಿ ಸಲ್ಲಿಸುವ ಮತ್ತು ಸದರಿ ಅರ್ಜಿಯ ಬಗ್ಗೆ ಸಂಬಂದಿಸಿದ ಪ್ರಕ್ರಿಯೆಗಳಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಸಂಬಂಧಪಟ್ಟ ಯಾತ್ರಿಕರೇ ಭರಿಸತಕ್ಕದ್ದು. ಯಾತ್ರೆಗೆ ಆಯ್ಕೆಯಾದ ನಂತರ ಚೀನಾ ದೇಶಕ್ಕೆ ಪಾವತಿಸಬೇಕಾಗಿರುವ ಮೊತ್ತ ಮತ್ತು ಪ್ರವಾಸದ ಇತರೆ ವೆಚ್ಚಗಳ ಸಂಬಂಧ ಗರಿಷ್ಠ ಊ 30,000/ ಸಹಾಯಾನುದಾನವನ್ನು ಮಾತ್ರ ನೀಡಲಾಗುವುದು.
8. ಯಾತ್ರಾರ್ಥಿಗಳು ಸಹಾಯಧನವನ್ನು ಒಂದು ಭಾರಿ ಪಡೆದ ನಂತರದಲ್ಲಿ ಅದೇ ವ್ಯಕ್ತಿಗೆ ಎರಡನೇ ಬಾರಿ ಸಹಾಯಧನ ನೀಡಲು ಪರಿಗಣಿಸಲಾಗುವುದಿಲ್ಲ. ಈ ಬಗ್ಗೆ ಯಾತ್ರಾರ್ಥಿಗಳೂ ರೂ 20/– ಗಳ ಛಾಪಕಾಗದಲ್ಲಿ ಈ ಹಿಂದೆ ಸಹಾಯಧನವನ್ನು ಪಡೆದಿಲ್ಲವೆಂದು ಧೃಢೀಕರಣ ನೀಡತಕ್ಕದ್ದು.

9. ಸ್ವೀಕರಿಸಿದ ಅರ್ಜಿಗಳ ಪೈಕಿ ಅರ್ಹ ಅರ್ಜಿದಾರರ ಹೆಸರುಗಳನ್ನು ಪರಿಶೀಲಿಸಿ, ಅರ್ಜಿಗಳ ಸಂಖ್ಯೆಯು 1500ಕ್ಕಿಂತ ಕಡಿಮೆ ಇದ್ದಲ್ಲಿ, ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗುವುದು. ಅರ್ಜಿಗಳ ಸಂಖ್ಯೆ 1500ಕ್ಕಿಂತ ಹೆಚ್ಚಾದಲ್ಲಿ, ಲಾಟರಿ ಮುಖಾಂತರ ಅನುದಾನಕ್ಕೆ ಅನುಗುಣವಾಗಿ ಫಲಾನುಭವಿಗಳನ್ನು ಆಯ್ಕೆಮಾಡಿ ಸಹಾಯಧನ ಮಂಜೂರು ಮಾಡಲಾಗುವುದು. ಲಾಟರಿಯನ್ನು ರಾಜ್ಯ ಧಾರ್ಮಿಕ ಪರಿಷತ್‌ನ ನ್ಯಾಯಿಕ ಸದ್ಯಸ್ಯರು, ಧಾರ್ಮಿಕ ದತ್ತಿ ಆಯುಕ್ತರ ಕಚೇರಿಯ ಕೇಂದ್ರ ಸ್ಥಾನಿಕ ಸಹಾಯಕರು ಹಾಗೂ ಪ್ರವರ್ಗ 'ಎ' ದೇವಾಲಯದ ಮೂರು ಜನ ಕಾರ್ಯನಿರ್ವಾಹಕರ ಅಧಿಕಾರಿಗಳನ್ನೊಳಗೊಂಡ 5 ಜನ ಸದಸ್ಯರ ಸಮಿತಿಯ ಸಮಕ್ಷಮದಲ್ಲಿ ಪೂರ್ಣವಾಗಿ ವಿಡಿಯೋ ಚಿತ್ರೀಕರಣವನ್ನು ಮಾಡಲಾಗುವುದು.
10. ಅರ್ಜಿ ಪಡೆಯುವವರು/ಸಲ್ಲಿಸುವವರು ಧಾರ್ಮಿಕದತ್ತಿ ಆಯುಕ್ತರ ಕಚೇರಿ, ಚಾಮರಾಜಪೇಟೆ, ಬೆಂಗಳೂರು –18 ಇಲ್ಲಿ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹದಾಗಿರುತ್ತದೆ.
11. ಆನ್‌ಲೈನ್ ಮೂಲಕ ಅರ್ಜಿಗಳನ್ನು http://nemaka.kar.ic.in/manasa_2019 ಅಥವಾ www.temples.karnataka.gov.in ಮೂಲಕ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರು ಅರ್ಜಿ ಸಲ್ಲಿಸಿದ ಅರ್ಜಿದಾರರ ಅರ್ಜಿ ಸಲ್ಲಿಸಿದ 5 ದಿನಗಳೊಳಾಗಿಅಗತ್ಯ ದಾಖಲಾತಿಗಳನ್ನು ಹಾರ್ಡ್ ಕಾಪಿ ಮೂಲಕ ಈ ಕಚೇರಿಗೆ ಖುದ್ದು ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಸೂಚಿಸಿದೆ. ತಪ್ಪಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ, 2ನೇ ಮಹಡಿ, ಮಿಂಟೋ ಆಂಜನೇಯ ಭವನ, ಚಾಮರಾಜಪೇಟೆ, ಬೆಂಗಳೂರು – 560 018 ಇಲ್ಲಿ ಸಂಪರ್ಕಿಸಬಹುದಾಗಿದೆ.

ಯಾವುದೇ ಕಾರಣಕ್ಕೂ ಮುದ್ದಾಂ ಹಾಗೂ ಆನ್‌ಲೈನ್ ಎರಡೂ ಕಡೆಯಲ್ಲೂ ಅರ್ಜಿಗಳನ್ನು ಸಲ್ಲಿಸತಕ್ಕದ್ದಲ್ಲ. ಹಾಗೆ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# <u>ಪ್ರಥಮ ಬಾರಿಗೆ ಚಾರ್‌ದಾಮ್ ಯಾತ್ರೆಗೆ ಧನಸಹಾಯ – ಅರ್ಜಿ ಆಹ್ವಾನ</u>

**ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)**

**2019 ನೇ ವರ್ಷದಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಚಾರ್‌ಧಾಮ್ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಧನಸಹಾಯ ನೀಡಲು ಯೋಜನೆಯನ್ನು ರೂಪಿಸಲಾಗಿದೆ.. ಅರ್ಜಿ ಸಲ್ಲಿಸುವವರು ಕೆಳಕಂಡ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ.**

1. **ಕರ್ನಾಟಕದಿಂದ ಚಾರ್‌ಧಾಮ್ ಯಾತ್ರೆ ಕೈಗೊಳ್ಳುವ ಪ್ರತಿ ಯಾತ್ರಿಕರಿಗೆ ಗರಿಷ್ಠ ರೂ 20,000/- ದಂತೆ 2750 ಫಲಾನುಭವಿಗಳಿಗೆ ಧನ ಸಹಾಯವನ್ನು 2019-20 ನೇ ಸಾಲಿನಲ್ಲಿ ನೀಡಲಾಗುವುದು.**
2. **ಕರ್ನಾಟಕ ಖಾಯಂ ನಿವಾಸಿಗಳು ಮಥ್ರ ಈ ಧನಸಹಾಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.**
3. **ಚಾರ್‌ಧಾಮ್ ಯಾತ್ರಾರ್ಥಿಗಳು 4 ಪುಣ್ಯ ಕ್ಷೇತ್ರಗಳ (ಬದರಿನಾಥ್, ಕೇದಾರ್‌ನಾಥ್, ಗಂಗೋತ್ರಿ, ಯುಮುನೋತ್ರಿ) ದರ್ಶನವನ್ನು ಪೂರೈಸಿರುವ ಬಗ್ಗೆ ಉತ್ತರಖಂಡ್ ಪ್ರವಾಸೋದ್ಯಮ ಮಂಡಳಿ ನೀಡುವ (Tourist / Pilgrim Registration & Tracking Access Card ) ಪಿಲ್ಗ್ರೀಮ್ ಕಾರ್ಡ್‌ನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**
4. **2019 ನೇ ಸಾಲಿನಲ್ಲಿ ಚಾರ್‌ಧಾಮ್ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳೂ ಸರ್ಕಾರದ ಧನಸಹಾಯ ಪಡೆಯಲು ಇಚ್ಛಿಸಿದ್ದಲ್ಲಿ ದಿನಾಂಕ: 16-12-2019 ರ ಅವಧಿಯೊಳಗಾಗಿ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಆನ್ ಲೈನ್ /ಮುದ್ದಾಂ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ನಂತರ ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**
5. **ಕರ್ನಾಟಕ ರಾಜ್ಯದಿಂದ 4 ಪುಣ್ಯ ಕ್ಷೇತ್ರಗಳ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳು ಆಯಾ ಆರ್ಥಿಕ ವರ್ಷದ ಮೊದಲ ದಿನಕ್ಕೆ ಅನ್ವಯಿಸುವಂತೆ ಏಪ್ರಿಲ್ 1 ಕ್ಕೆ 45 ವರ್ಷಗಳ ಮೇಲ್ಪಟ್ಟವರಾಗರಿತಕ್ಕದ್ದು. 45 ವರ್ಷ ವಯಸ್ಸಿನ ಕೆಳಗಿನವರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 45 ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ವಯಸ್ಸಿಗೆ ಸಂಬಂಧಿಸಿದ ಸೂಕ್ತ ದಾಖಲೆಯನ್ನು ಹಾಜರುಪಡಿಸುವುದು.**

6. ಯಾತ್ರಾರ್ಥಿಗಳು ಸಹಾಯಧನವನ್ನು ಒಂದು ಭಾರಿ ಪಡೆದ ನಂತರದಲ್ಲಿ ಅದೇ ವ್ಯಕ್ತಿಗೆ ಎರಡನೇ ಬಾರಿ ಸಹಾಯ ಧನ ನೀಡಲು ಪರಿಗಣಿಸಲಾಗುವುದಿಲ್ಲ. ಈ ಬಗ್ಗೆ ಯಾತ್ರಾರ್ಥಿಗಳು ರೂ 20/ ಗಳ ಛಾಪಕಾರದದಲ್ಲಿ ಈ ಹಿಂದೆ ಸಹಾಯಧನವನ್ನು ಪಡೆದಿಲ್ಲವೆಂದು ಧೃಢೀಕರಣ ನೀಡತಕ್ಕದ್ದು.

7. ಸ್ವೀಕರಿಸಿದ ಅರ್ಜಿಗಳ ಪೈಕಿ ಅರ್ಹ ಅರ್ಜಿದಾರರ ಹೆಸರುಗಳನ್ನು ಪರಿಶೀಲಿಸಿ, ಅರ್ಜಿಗಳ ಸಂಖ್ಯೆಯು 2750 ಕ್ಕಿಂತ ಕಡಿಮೆ ಇದ್ದಲ್ಲಿ, ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗುವುದು. ಅರ್ಜಿಗಳ ಸಂಖ್ಯೆ 2750 ಕ್ಕಿಂತ ಹೆಚ್ಚಾದಲ್ಲಿ, ಲಾಟರಿ ಮುಖಾಂತರ ಅನುದಾನಕ್ಕೆ ಅನುಗುಣವಾಗಿ ಫಲಾನುಭವಿಗಳನ್ನು ಆಯ್ಕೆಮಾಡಿ ಸಹಾಯಧನ ಮಂಜೂರು ಮಾಡಲಾಗುವುದು. ಲಾಟರಿಯನ್ನು ರಾಜ್ಯ ಧಾರ್ಮಿಕ ಪರಿಷತ್‌ನ ನ್ಯಾಯಿಕ ಸದ್ಯಸರು, ಧಾರ್ಮಿಕ ದತ್ತಿ ಆಯುಕ್ತರ ಕಚೇರಿಯ ಕೇಂದ್ರ ಸ್ಥಾನಿಕ ಸಹಾಯಕರು ಹಾಗೂ ಪ್ರವರ್ಗ 'ಎ' ದೇವಾಲಯದ ಮೂರು ಜನ ಕಾರ್ಯನಿರ್ವಾಹಕರ ಅಧಿಕಾರಿಗಳನ್ನೊಳಗೊಂಡ 05 ಜನ ಸದಸ್ಯರ ಸಮಿತಿಯ ಸಮಕ್ಷಮದಲ್ಲಿ ಪೂರ್ಣವಾಗಿ ವಿಡಿಯೋ ಚಿತ್ರೀಕರಣವನ್ನು ಮಾಡಲಾಗುವುದು.
8. ಅರ್ಜಿ ಪಡೆಯುವವರು/ಸಲ್ಲಿಸುವವರು ಧಾರ್ಮಿಕದತ್ತಿ ಆಯುಕ್ತರ ಕಚೇರಿ, ಚಾಮರಾಜಪೇಟೆ, ಬೆಂಗಳೂರು –18 ಇಲ್ಲಿ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹದಾಗಿರುತ್ತದೆ
9. ಆನ್‌ಲೈನ್ ಮೂಲಕ ಅರ್ಜಿಗಳನ್ನು **http://nemaka.kar.nic.in/chardham_2019 2019** ಅಥವಾ **[www.temples.karnataka.gov.in](http://www.temples.karnataka.gov.in)** ಮೂಲಕ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರು ಅರ್ಜಿ ಸಲ್ಲಿಸಿದ ಅರ್ಜಿದಾರರ ಅರ್ಜಿ ಸಲ್ಲಿಸಿದ 5 ದಿನಗಳೊಳಾಗಿ ಅಗತ್ಯ ದಾಖಲಾತಿಗಳನ್ನು ಹಾರ್ಡ್ ಕಾಫಿ ಮೂಲಕ ಈ ಕಚೇರಿಗೆ ಖುದ್ದು ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಸೂಚಿಸಿದೆ. ತಪ್ಪಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
10. ಹೆಚ್ಚಿನ ಮಾಹಿತಿಗಾಗಿ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ, 2ನೇ ಮಹಡಿ, ಮಿಂಟೋ ಆಂಜನೇಯ ಭವನ, ಚಾಮರಾಜಪೇಟೆ, ಬೆಂಗಳೂರು – 560 018 ಇಲ್ಲಿ ಸಂಪರ್ಕಿಸಬಹುದಾಗಿದೆ.

ಯಾವುದೇ ಕಾರಣಕ್ಕೂ ಮುದ್ದಾಂ ಹಾಗೂ ಆನ್‌ಲೈನ್ ಎರಡೂ ಕಡೆಯಲ್ಲೂ ಅರ್ಜಿಗಳನ್ನು ಸಲ್ಲಿಸತಕ್ಕದ್ದಲ್ಲ. ಹಾಗೆ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್ –ಎ ತಾಂತ್ರಿಕ ಮತ್ತು ಗ್ರೂಪ್ ಬಿ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳ ನೇಮಕಾತಿಗಾಗಿ ಆಯೋಗ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ಆಯಾ ಹುದ್ದೆಗಳ ಮುಂದೆ ನಮೂದಿಸಿರುವ ದಿನಾಂಕಗಳಂದು ಸಂದರ್ಶನವನ್ನು ನಡೆಸಲಿದೆ.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಜಿಲ್ಲಾ ವ್ಯವಸ್ಥಾಪಕರು – 3 ಹುದ್ದೆ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಸಹಾಯಕ ಜಿಲ್ಲಾ ವ್ಯವಸ್ಥಾಪಕರು–3 ಹುದ್ದೆ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿ – 30 + 14 (ಹೈಕ) ಹುದ್ದೆಗಳಿಗಾಗಿ ಸಂದರ್ಶನ 18–11–2019 ಮತ್ತು 19–11–2019 ರಂದು ಬೆಳಿಗ್ಗೆ 9.30 ಗಂಟೆಗೆ ಮತ್ತು ಮಧ್ಯಾಹ್ನ 2.30 ಗಂಟೆಗೆ ಹಾಗೂ ನವೆಂಬರ್ 20 ರಂದು ಬೆಳಿಗ್ಗೆ 9.30 ಗಂಟೆಗೆ ನಡೆಯಲಿದೆ.

ಪೌರಾಡಳಿತ ನಿರ್ದೇಶನಾಲಯದ ಮಹಾನಗರ ಪಾಲಿಕೆಗಳಲ್ಲಿ ಸಹಾಯಕ ಅಭಿಯಂತರರು (ಸಿವಿಲ್)–01 (ಹೈ.ಕ) ಹುದ್ದೆಗೆ ಸಂದರ್ಶನ ನವೆಂಬರ್ 20 ರಂದು ಮಧ್ಯಾಹ್ನ 2.30 ಗಂಟೆಗೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿ – 07+03(ಹೈ.ಕ) ಹುದ್ದೆಗಳಿಗೆ ನವೆಂಬರ್ 20 ರಂದು ಮಧ್ಯಾಹ್ನ 2.30 ಗಂಟೆಗೆ ಹಾಗೂ 21.11.2019 ರಂದು ಬೆಳಿಗ್ಗೆ 9.30 ಗಂಟೆಗೆ ಸಂದರ್ಶನ ನಡೆಯಲಿದೆ.

ಔಷಧ ನಿಯಂತ್ರಣ ಇಲಾಖೆಯಲ್ಲಿ ಔಷಧ ಪರಿವೀಕ್ಷಕರು – 68 + 15(ಹೈಕ) ಹುದ್ದೆಗಾಗಿ ನವೆಂಬರ್ 21, 22, 25, 26 ಹಾಗೂ 27 ರಂದು ಬೆಳಿಗ್ಗೆ 9.30 ಗಂಟೆಗೆ ಹಾಗೂ ಮಧ್ಯಾಹ್ನ 2.30 ಗಂಟೆಗೆ ಸಂದರ್ಶನ ನಡೆಯಲಿದೆ.

ಅಭ್ಯರ್ಥಿಗಳಿಗೆ ಸಂದರ್ಶನ ಸೂಚನಾ ಪತ್ರಗಳನ್ನು ಈಗಾಗಲೇ ಕಳಿಹಿಸಲಾಗಿದೆ. ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು ಮಾಹಿತಿಗಾಗಿ ವೆಬ್‌ಸೈಟ್ "http://kpsc.kar.nic./Eligibility List" ಗಳಲ್ಲಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

<u>ಅವಧಿ ವಿಸ್ತರಣೆ</u>

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಮಾರ್ಚ್/ಏಪ್ರಿಲ್ – 2020 ರ ಎಸ್.ಎಸ್.ಎಲ್.ಸಿ. ಪರೀಕ್ಷೆ ಹಾಜರಾಗುವ ಅರ್ಹ ಸಾಲಾ ವಿದ್ಯಾಥಿಗಳ (ಅಅಇಖಈ) ಖಾಸಗಿ ಅಭ್ಯರ್ಥಿಗಳ (CCEPF ) ಮತ್ತು ಪುನರಾವರ್ತಿತ ಅಭ್ಯರ್ಥಿಗಳ ( CCERR, CCEPR, NSR ಮತ್ತು NSRP) ಪರೀಕ್ಷಾ ಶುಲ್ಕದ ಚಲನ್ ಮುದ್ರಿಸಿಕೊಂಡು ನೆಫ್ಟ್ ಮೂಲಕ ಬ್ಯಾಂಕ್‌ಗೆ ಜಮೆ ಮಾಡಲು ದಿನಾಂಕವನ್ನು ಕೆಳಕಂಡಂತೆ ವಿಸ್ತರಿಸಲಾಗಿದೆ.

ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕ CCERF, CCERR, CCEPR, NSR ಮತ್ತು NSRP ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಚಲನ್ ಮುದ್ರಿಸಿಕೊಂಡು ನೆಫ್ಟ್ ಮೂಲಕ ಬ್ಯಾಂಕ್‌ಗೆ ಜಮೆ ಮಾಡಲು ಈ ಹಿಂದೆ ನಿಗಧಿಪಸಿದ ಕೊನೆಯ ದಿನಾಂಕವನ್ನು ನವೆಂಬರ್ 16 ರ ಬದಲಾಗಿ ನವೆಂಬರ್ 22 ಅನ್ನು ನಿಗಧಿಪಡಿಸಲಾಗಿದೆ.

2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುರಾವರ್ತಿತ ಅಭ್ಯರ್ಥಿಗಳ (NSR & NSPR) ಎಂಎಸ್‌ಎ, ನಾಮಿನಲ್‌ರೋಲ್ ಮತ್ತು ಸಂಬಂಧಿಸಿದ ದಾಖಲೆಗಳನ್ನು ಮಂಡಳಿಗೆ ಭೌತಿಕವಾಗಿ ಸಲ್ಲಿಸಲು ಕೊನೆಯ ದಿನಾಂಕವನ್ನು ನವೆಂಬರ್ 22 ರ ಬದಲಾಗಿ ನವೆಂಬರ್ 30 ಕ್ಕೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

## Char-Dham Yatra : Financial Assistance

**Bengaluru, November 11 (Karnataka Information)**

**Applications are invited to provide financial assistance of Rs. 20,000/- to the pilgrims who have completed first time Char-Dham Yatra in the financial year 2019-20.**

**Pilgrim must be a permanent resident of Karnataka. The Pilgrim should be above 45 years age. Pilgrim should have visited Badrinath, Kedrnath, Yamunothri and Gangothri. All Applications should be submitted before November 16 by 4.00 p.m. only.**

**The Number of Pilgrims to whom Financial Assistance will be provided are subject to budget provision under this scheme. Application can be submitted either by the Online/Hard copy to this office. Online application Website Address : http://nemaka.kar.nic.in/manasa_2019 or www.temples. karnataka. gov.in**

**Pilgrims has to submit the Hard Copy by Hand or Post to this office within 5 days after applying the Online Application, or else application will be Rejected.**

**Mandatory Documents required are Chardham Pilgrim Card (4 Dham's Should be Entered) National Bank Cancelled Bank Cheque. Bank pass book Front Page Xerox, Affidavit done in Rs. 20/- E-stamp Paper, Aadhar Card and Voter ID. says Endowment department press release**

## Kailas Yatra : Financial Assistance

**Bengaluru, November 11 (Karnataka Information)**

**Applications are invited to provide financial assistance of Rs. 30,000/- to the pilgrims who have completed First time Kailas Yatra in the financial year 2019-20. Pilgrim must be a permanent resident of Karnataka. Applications should be submitted before Dt. November 16 by 4-00 pm only. The Number of Pilgrims to who Financial Assistance will be provided are**

**subject to budget provision under this scheme. Application can be submitted either by the Online/Hard Copy to this office. Online. application Website Address: http://nemaka.kar.nic.in/Chardham_2019 or www.temples. karnataka.gov.in Pilgrims has to submit the Hard Copy By Hand or Post to This Office within 5 days after applying the Online Application, or else application will be Rejected.**

**The mandatory documents are One Passport Size Photo, UIDAI Aadhar Card, Voter ID, Cancelled Cheque Leaf, Passbook First page Xerox, Group Visa, Certificate issued by Central Government which States the route authorised by the Central Government for Manasa Sarovar Yatra should be submitted, C.I.P.S.C. Certificate issued by LASHA, China Govt. travelled in the Route of Nepal with the seal & copy of the visa issued by China Govt, Self Declaration Affidavit of Rs. 20/- in E-Stamp Paper, Colour Xerox of First Page, Last Pag and the Sealed part of the Passport has to be submitted says Endowment department press release.**

## ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ವಸತಿ ಮತ್ತು ತೋಟಗಾರಿಕೆ ಹಾಗೂ ರೇಷ್ಮೆ ಸಚಿವ ಶ್ರೀ ವಿ. ಸೋಮಣ್ಣ ಅವರು ನವೆಂಬರ್ 12 ರಂದು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಅಪರಾಹ್ನ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.